ಪರಂಪರೆಯ ಕೆಲಸವಾಗಿತ್ತು, ಹೀಗಾಗಿ ಲಾಲಾ ಸಹ ಇದಕ್ಕೇ ಇಳಿದಿದ್ದ. ಅವನ ಚಿಕ್ಕಪ್ಪನೊಂದಿಗೆ ನನ್ನ ಹಳೆಯ ಪರಿಚಯವಿತ್ತು. ಅವರೇ, "ಲಾಲಾ ಮಾಡ್ರನ್ ಹುಡುಗ. ನಿಮ್ಮ ಮಗನ ಮದುವೆಯನ್ನು ಸರಿಯಾದ ಹೆಣ್ಣಿನೊಂದಿಗೆ ಫಿಟ್ ಮಾಡಿಸುತ್ತಾನೆ" ಎಂದಿದ್ದರು.

ಲಾಲಾನನ್ನು ಅದೆಷ್ಟೋ ಬಾರಿ ನನಗಾಗಿ ವ್ಯಗ್ರಗೊಳಿಸಿದೆ. ಅವನು ನನಗೆ ಅಂಕಲ್ ಎನ್ನುತ್ತಿದ್ದ. ಅವನನ್ನು ನೋಡಿದರೆ, ಇದು ಅವನ ಜೀವನದ ಮೊದಲ ಅಸೈನ್‌ಮೆಂಟ್, ಇದನ್ನು ಅವನು ಹೇಗಾದರೂ ಮಾಡಿ ಈಡೇರಿಸುತ್ತಾನೆ ಎಂದು ತೋರುತ್ತಿತ್ತು.

ನನಗೆ ಭಾನುವಾರ ಮತ್ತು ಸೋಮವಾರದ ವ್ಯತ್ಯಾಸ ಕಾಣಬರುತ್ತಿರಲಿಲ್ಲ. ಅಂಶುಲ್ ಶಿಪ್‌ಗೆ ಮರಳಿ ಹೋಗಿದ್ದ. ಅವನು ಹೋಗುತ್ತಲೇ ನಾನು ಗಾಲ್ಫ್ ಕ್ಲಬ್‌ನ ಸದಸ್ಯತ್ವವನ್ನು ತೆಗೆದುಕೊಂಡೆ. ಬಹುಶಃ ಅಲ್ಲಿ ಭಾವಿ ಸೊಸೆಯ 'ಭಾರ'ದ ಅಪ್ಪ ಸಿಗಬಹುದು!

ನಾನು ಗಾಲ್ಫ್ ಆಟವಾಡಿ ಮರಳಿ ಬಂದೆ, ಸ್ನಾನ ಮಾಡಿ ನನ್ನಿಷ್ಟದ ಶರ್ಟ್ಸ್ ಧರಿಸಿ ಫ್ರಿಡ್ಜ್‌ನಿಂದ ಬೀರ್ ಬಾಟಲಿ ತೆಗೆಯುತ್ತಿರುವಾಗ, ಬಾಗಿಲ ಗಂಟೆ ಬಾರಿಸಿತು.

ಜೀತರಾಮ ಎರಡು ನಿಮಿಷದ ನಂತರ ಬಂದು ಹೇಳಿದ, "ಸಾರ್, ಲಾಲಾ ಸಾಹೇಬರು ಬಂದಿದ್ದಾರೆ..."

ಲಾಲಾನೊಂದಿಗೆ ಸಾಹೇಬ ಶಬ್ದ ಕೇಳುತ್ತಲೇ ನಾನು ಅಟೆನ್‌ಶನ್ ಪೊಜಿಶನ್‌ಗೆ ಬಂದೆ. ಲಾಲನ ಹೆಸರಿನಲ್ಲಿ ಈಗ ಯಾರು ಬಂದರು?

ಬಂದವನು ಲಾಲಾನೇ ಆಗಿದ್ದ, ಆದರೆ ಅವನ ಹಿಂದೆ ಒಂದು ವಿಚಿತ್ರ ನೆರಳು ಸಹ ಇತ್ತು.

ನಾನು ಮುಂದೆ ಬರುವುದಕ್ಕೆ ಮೊದಲೇ ಲಾಲಾ ಖುದ್ದು ಮುಂದೆ ಬಂದು ನನ್ನ ಕಿವಿಯಲ್ಲಿ ಉಸುರಿದ, "ಅಂಕಲ್, ಒಬ್ಬರು ಆಂಟಿಯನ್ನು ಕರೆತಂದಿದ್ದೇನೆ. ಅವರೊಂದಿಗೆ ನಿಮ್ಮನ್ನು ಭೇಟಿ ಮಾಡಿಸುತ್ತೇನೆ. ಅವರಿಗೆ ನಿಮ್ಮ ಪರಿಚಯ ಮೋದಲೇ ಇದೆಯಂತೆ. ಆದರೆ ನೀವು ಅವರೆದುರಿಗೆ ಈ ವೇಷದಲ್ಲಿ ಹೋಗುತ್ತೀರ?"

ಲಾಲಾನ ದೃಷ್ಟಿಯನ್ನು ಎದುರಿಸಲಾಗದೆ ಅಥವಾ ನನ್ನ ಅಸಹಾಯಕತೆಯಿಂದಾಗಿಯೋ, ನಾನು ಎರಡು ನಿಮಿಷದಲ್ಲಿ ಜೀನ್ಸ್ ಧರಿಸಿ ಬಂದೆ.

ನೆರಳು ಮುಂದೆ ಬಂತು. ವಯಸ್ಸಾದ ಈ ಹೆಂಗಸನ್ನು ಲಾಲಾ ಯಾಕೆ ಕರೆತಂದ? ಈ ಹೆಂಗಸು ಗಿಡ್ಡವಾಗಿದ್ದರಿಂದ ದಡೂತಿಯಾಗಿ ಕಾಣಿಸುತ್ತಿದ್ದಳು. ತಲೆಕೂದಲುಗಳು ಸುಮಾರಾಗಿ ಶ್ವೇತವರ್ಣಕ್ಕೆ ಹೊರಳಿದ್ದವು. ಹಳದಿ ಬಣ್ಣದ ಸಲ್ವಾರ್‌ಕಮೀಜ್ ಧರಿಸಿದ್ದಳು. ನನ್ನ ಮುಖದಲ್ಲಿ ಮೂಡಿದ್ದ ವಿಚಿತ್ರ ಚಿಂತೆಯನ್ನು ನೋಡಿ ಅವಳು ಮುಂದೆ ಬಂದು ಕೇಳೀದಳು, "ಗುರುತು ಸಿಕ್ತಾ?"

ನಾನು ಇಲ್ಲವೆಂಬಂತೆ ತಲೆಯಾಡಿಸಿದೆ.

"ನಾವು ಕಾಲೇಜಿನಲ್ಲಿ ಒಂದೇ ಕ್ಲಾಸಿನಲ್ಲಿದ್ದೆವು... ಜೊತೆಯಲ್ಲಿ ನಾಟಕ ಮಾಡುತ್ತಿದ್ದೆವು."

ನನ್ನ ಕ್ಲಾಸ್‌ಮೇಟ್? ಇಷ್ಟು ವೃದ್ಧಳೇ? ನಾನು ಮಾತನಾಡಬೇಕೆಂದಿರುವಾಗ, ನನಗೆ ಅರ್ಥವಾಗದಿರುವುದನ್ನು ನೆರಳು ಅರ್ಥ ಮಾಡಿಕೊಂಡಿತು.

"ನಾನು ಸರಿತಾ... ನೆನಪು ಮಾಡಿಕೊಡಲಾ? ಬಿ.ಎ. ಫೈನಲ್ ಇಯರ್‌ನಲ್ಲಿ ನಾವು ರೋಮಿಯೋ ಜೂಲಿಯಟ್ ಪ್ಲೇ ಆಡಿದ್ದೆವು..."

ಜೂಲಿಯಟ್... ಸರಿತಾ... ಇವಳ ಗುಂಗುರು ಕೂದಲಿಗೆ ಇಡೀ ಕಾಲೇಜೇ ಮರುಳಾಗಿತ್ತು? ಇವಳ ಗಜ್ಜುಗದಂಥ ಕಣ್ಣುಗಳು ರಾತ್ರಿಯ ನಿದ್ರೆಯನ್ನು ಕೆಡಿಸುತ್ತಿದ್ದವು? ಇವಳ ಧ್ವನಿ ಕೇಳಿ ಸಾವಿರಾರು ತಲೆಗಳು ಹಾಸ್ಟೇಲ್ ಕಿಡಕಿಯಿಂದ ತಮ್ಮ ತಲೆಯನ್ನು ಹೊರ ಹಾಕುತ್ತಿದ್ದವು?